


ಬರುತ್ತಿದ್ದ; ಸಂಜೆ ಹೊತ್ತಿಗೆ ಮರಳಿ ಕಮಲಾಪುರಕ್ಕೆ ಖಾಲಿ ಬುಟ್ಟಿಯೊಂದಿಗೆ ಮರಳುತ್ತಿದ್ದ; ಆತ ತೀರಿಕೊಂಡನೆಂದು ಗೊತ್ತಾದಾಗ, ಛೇ! ಅವನನ್ನು ಒಂದು ದಿನವಾದರೂ ನಿಲ್ಲಿಸಿ, 'ಏನಪ್ಪಾ ನಿನ್ನ ಹರಕೆ?' ಎಂದು ಕೇಳುವ ಅವಕಾಶ ಕಳೆದುಕೊಂಡೆನಲ್ಲ ಎಂದು ಪರಿತಾಪವಾಯಿತು. ಆತನ ಕಾಯಕ ನಿಗೂಢವಾಗಿತ್ತು. ಬದುಕಿಗೆ ಅರ್ಥಕೊಡಲು ಜನ ಎಂತೆಂತಹ ಹಾದಿಗಳನ್ನು ಆರಿಸಿಕೊಳ್ಳುವರು? ಹಂಪಿ ವಿರೂಪಾಕ್ಷನ ಅರ್ಚಕನಾಗಿ ಪ್ರತಿಗಿಡದ ಮುಂದೆ ಹೂಬೇಡುತ್ತ ಕವಿ ಹರಿಹರ 'ಪುಷ್ಪರಗಳೆ' ಬರೆದಿದ್ದನು. ಈ ಅಜ್ಜ ದೈವವೆಂದರೆ ವಿರೂಪಾಕ್ಷನೊಬ್ಬನೇ ಅಲ್ಲ ಎಂಬಂತೆ ಹಾದಿಬದಿಯ ಎಲ್ಲ ದೈವಗಳಿಗೂ ಪುಷ್ಪಾರ್ಚನೆ ಸಲ್ಲಿಸುತ್ತಿದ್ದನು.

ನಾನು ಹೊಸ ವಾಹನವೇರಿ, ಹೊಸಹಾದಿ ಹಿಡಿದು, ಹಂಪಿರೋಡಿನ ಅನುಭವ ಪ್ರಪಂಚದಿಂದ ದೂರವಾಗಿರುವುದು ನಿಜ. ಹೊಸಹಾದಿ ಹಿಡಿದಾಗ ಹಳೆಯ ಹಾದಿ ಸಂಪೂರ್ಣವಾಗಿ ಕಳೆದೇನೂ ಹೋಗುವುದಿಲ್ಲ. ಹಲವು ರೂಪಗಳಲ್ಲಿ ಜೀವತಳೆದು ನೆನಪುಗಳಾಗಿ ಕಾಡುತ್ತದೆ. ಇಷ್ಟಕ್ಕೂ ಈಗಿನ ಹೊಸಹಾದಿ ಅನುಭವರಹಿತ ಎಂದು ತಿಳಿಯಲೇಕೆ? ಅನುಭವಕ್ಕೆ ಕಾರಣವಾಗುವುದು, ಹಾದಿಯೊ ವಾಹನವೊ ಕಾಣುವ ಕಣ್ಣೊ?

## ರಹಮತ್ ತರೀಕೆರೆ

ಸಂಸ್ಕೃತಿ ಚಿಂತಕ, ಹತ್ತಾರು ಪುಸ್ತಕಗಳ ಲೇಖಕ ರಹಮತ್ ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರು. ದೇಶ ಸುತ್ತುವ ಹವ್ಯಾಸವಿರುವ ಈ ಲೇಖಕ ತಾವು ನಿತ್ಯವೂ ಹಾಯುವ ಹಂಪಿಯ ಊರ ದಾರಿಯ ಕುರಿತಾಗಿ ಇಲ್ಲಿ ಬರೆದಿದ್ದಾರೆ. 'ಲೋಕ ವಿರೋಧಿಗಳ ಜೊತೆಯಲ್ಲಿ', 'ಕತ್ತಿಯಂಚಿನ ದಾರಿ', 'ಪ್ರತಿಸಂಸ್ಕೃತಿ', 'ಮರದೊಳಗಣ ಕಿಚ್ಚು', 'ಅಮೀರ್‌ಬಾಯಿ ಕರ್ನಾಟಕಿ', 'ನಡೆದಷ್ಟೂ ನಾಡು' ಅವರ ಮುಖ್ಯ ಪುಸ್ತಕಗಳಾಗಿವೆ. ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ಅವರ ಊರು.